# ಅಂಗೈಯಲ್ಲಿ ಅರಮನೆ

## ಗೋಲಿ ನುಂಗು ಸರಿ ಹೋಗುತ್ತೆ!

ನಾನಾಗ ಗುಲ್ಬರ್ಗದಲ್ಲಿ ಕೆಲಸ ಮಾಡುತ್ತಿದ್ದ ಸಮಯ. ನನ್ನ ಬಾವನ ಮಗಳು ಪೂಜಾ ಆಗ ತುಂಬಾ ಚಿಕ್ಕವಳು. ಹುಟ್ಟಿ ಬೆಳೆದದ್ದೆಲ್ಲಾ ಬೆಂಗಳೂರಿನಲ್ಲಿಯೇ. ಅವಳಿಗೆ ರಜೆ ಇದ್ದುದ್ದರಿಂದ ಗುಲ್ಬರ್ಗಕ್ಕೆ ಬಂದಿದ್ದಳು. ರಜೆಯಲ್ಲಿ ಅವಳಿಗೆ ಜ್ವರ ಬಂದಿದ್ದರಿಂದ ಸಮೀಪದ ಡಾಕ್ಟರ್ ಬಳಿಗೆ ಕರೆದುಕೊಂಡು ಹೋಗಿದ್ದೆ. ಅವರು ಚೆಕ್ ಮಾಡಿ, 'ಎರಡು ದಿನ ಗೋಲಿ ನುಂಗು ಸರಿ ಹೋಗುತ್ತೆ' ಎಂದರು.

ಗೋಲಿ ನುಂಗಬೇಕು ಎನ್ನುವುದನ್ನು ಕೇಳಿ ಪೂಜಾ ಗಾಬರಿಯಾಗಿದ್ದಳು. ಆಸ್ಪತ್ರೆಯಿಂದ ಹೊರಬಂದಾಗ 'ಯಾರಾದರೂ ಗೋಲಿ ನುಂಗುತ್ತಾರಾ' ಎಂದು ಕೇಳಿದಳು. ಗುಲ್ಬರ್ಗಾದ ಕಡೆ ಮಾತ್ರೆಗೆ 'ಗೋಲಿ' ಎಂಬ ಪದ ಬಳಸುತ್ತಾರೆ ಎಂದು ಹೇಳಿದಾಗ ಪೂಜಾಳ ಮುಖದಲ್ಲಿ ನಗು ಮೂಡಿತು.

**ಬಿ. ಬಸವರಾಜ್**





## ಹಾವಿನ ಮಣ್ಣು ಬೇಕು!

ವಾರದ ಸಂತೆಯ ತರಕಾರಿ, ಹಣ್ಣು ಖರೀದಿಗೆ ಅಂಗನವಾಡಿ ಹೋಗುವ ನಮ್ಮ ನಾದಿನಿ ಮಗ ಶ್ರೀನಿಧಿ ಜೊತೆಗಿದ್ದ. ತರಕಾರಿ ಖರೀದಿ ತರುವಾಯ ಹೊರಟಾಗ ಆತ, ತನಗೆ ಹಾವಿನ ಮಣ್ಣು ಬೇಕು ಎಂದ. ಅದ್ಯಾಕೋ ನಿಂಗೆ? ಎಂದೆ. ತಿನ್ನಲಿಕ್ಕೆ ಎಂದನಾತ. ಹಾಗೆಲ್ಲಾ ಹಾವಿನ ಮಣ್ಣು ತಿನ್ನಬಾರದು, ಅದು ಮನುಷ್ಯ ತಿನ್ನುವುದಲ್ಲ ಎಂದೆ. ಅಲ್ಲೆಲ್ಲಾ ತಿಂತಾ ಇದಾರೆ. ಮತ್ತೆ ನೀನೇ ನೋಡು ಅಂದ. ಹೌದು! ರಾಶಿ ಹಾಕಿದ್ದ ಮಾವಿನ ಹಣ್ಣಿನ ರುಚಿ ನೋಡುತ್ತಿದ್ದರು ಜನ ಖರೀದಿಗೆ!.

ಸಂತೆಗೆ ಬರುವಾಗ ದಾರಿಯಲ್ಲಿ ಇದ್ದ ಬೃಹತ್ ಹುತ್ತದ ಬಗ್ಗೆ ಕೇಳಿದ್ದ ಆತ. ಗೆದ್ದಲು ಹುಳ ಕಟ್ಟಿದ ಮಣ್ಣು ಗೂಡಲ್ಲಿ (ಹುತ್ತ) ಹಾವು ಇರುತ್ತೆ ಎಂದಿದ್ದೆ. ಅದರಿಂದ ಆತನಲ್ಲಿ ಅದರ ಬಗ್ಗೆಯೇ ಯೋಚನೆ ಇತ್ತು. ಅದರಿಂದ ಆತ ತೊದಲು ನುಡಿಯಲ್ಲಿ ಮಾವಿನ ಹಣ್ಣನ್ನು ಹಾವಿನಮಣ್ಣು ಮಾಡಿದ್ದ!.

**ನಗರ ಗುರುದೇವ್ ಭಂಡಾರ್ಕರ್**

ಕಲೆ: ಗಣೇಶ ಆಚಾರ್ಯ